
ಕವಿತೆ



ಅಶೋಕ ಹೊಸಮನಿ

ಕಲೆ:ಎಸ್.ಎಸ್. ಕಾಖಂಡಕಿ



# ಅನಾಥ ಯಾತ್ರಿಕನ ಅಳು

ಮುರಿದು ಚೂರಾದ ರೊಟ್ಟಿ ಸುಡಬಹುದು ಕೈಗಳನ್ನು
ಕುಲುಕುಲು ನಗುವ ಹೆಂಚಿನ ಕೆಂಡ ಕತ್ತಲೆಗೆ ದೂಡಬಹುದು

ಅಳಿದು ತೂಗಿದ ಕಿಟಕಿಯ ನೆರಳು
ಕಸಿಯಬಹುದು ನೆಮ್ಮದಿಯ ಕೋಣೆಯ ಬೆಳಕಿನ ಕಣ್ಣನ್ನು

ನಾದಬಹುದು ಹಿಟ್ಟಿನಂತೆ
ಮೈಯನ್ನು
ಆತ್ಮವನ್ನು
ಖಾಲಿಪಾತ್ರೆಯ ಗರ್ಭವ ಹೊಕ್ಕು

ಗೋಡೆಗಳ ಹಣ್ಣು ಕೊಳೆಯಬಹುದು
ಪದ ಪದಗಳ ಮಥಿಸಿ
ನದಿ ನದಿಗಳ ಹಿಂಡಿ ಹಿಪ್ಪೆಯಾಗಿಸಿ

ಉಣಬಹುದು ಮುರಿದು ಚೂರಾದ ರೊಟ್ಟಿಯನ್ನು
ಕರುಳು ಸುಡುವ ವೈನ್ ಆಕಳಿಸಿದಾಗ
ನವಿರೇಳಿಸುವ ಪಾನಗೋಷ್ಠಿಯಲ್ಲಿ
ಆತ್ಮಗಳು ನೆತ್ತರ ಚಿಮ್ಮುವಾಗ
ಅನಾಥ ಯಾತ್ರಿಗಳು ಅಳುವಾಗ

ನೆಮ್ಮದಿ ಮಂತ್ರಗಳ ಉಸುರುವ ಕಿರೀಟದ
ಮೆರವಣಿಗೆಯಲ್ಲಿ
ರೊಟ್ಟಿಗಳ ದಾರುಣ ಹತ್ಯೆ
ಗಾಯಗಳ ಸಮಾಗಮದಲ್ಲಿ
ಸತ್ತ ನಾಲಿಗೆಯ ಚಡಪಡಿಕೆ
ಪಂಜರದ ಪಕ್ಷಿಗಳ
ಖಾಯಂ ಉಲಿ
ಬೇಲಿಯ ಉರಿಯ ತಾಕಿ

ನೆನಪುಗಳಿಗೊಂದು
ಮೊಳೆ ಜಡಿದು
ಅನವರತ ಸಾವಿನ ಮುನ್ನುಡಿಯ ಬೆಳಕಿನಲ್ಲಿ